ಹೊರೆಯಾಗಲೂ ಇಲ್ಲ... 'ಸಾವೇ, ಬರುವುದಿದ್ದರೆ ಹೀಗೆ ಬಾ...' ಎಂಬ ಆಶಯದ ಸಾವು ಅವರದಾಗಿತ್ತು.

1990ರಲ್ಲೇ ಬೈಪಾಸ್ ಸರ್ಜರಿಗೆ ಒಳಗಾಗಿದ್ದ ಬಿ.ವಿ.ವೀ., ದಿನವೂ ಬೆಳಗ್ಗೆ ಹಾಗೂ ಸಂಜೆ ಕಾಲ್ನಡಿಗೆಯನ್ನು ತಪ್ಪದೇ ವ್ರತವೆನ್ನುವಂತೆ ಪಾಲಿಸುತ್ತಿದ್ದರು. ಕಳೆದ ಐದಾರು ವರ್ಷಗಳಿಂದ ಅವರಿಗೆ ಒಂದು ರೀತಿಯ ಮರೆಗುಳಿತನ ಆವರಿಸಿತ್ತು. ಆದರೆ ಹೀಗೆ ತಮಗೆ ಮರೆವಿನ ಕಾಯಿಲೆ ಇದೆ ಎಂಬುದನ್ನು ಮಾತ್ರ ಎಲ್ಲರಿಗೂ ಮರೆಯದೇ ಹೇಳುತ್ತಿದ್ದರು. ಆದರೆ ನಿಜವಾಗಿ ಅದು ಕಾಯಿಲೆಯೇ ಆಗಿರಲಿಲ್ಲ. ಅವರ ಅಪಾರ ಓದಿನ ಫಲವಾಗಿ ಮೆದುಳಿನ ಎಲ್ಲ ಭಾಗಗಳೂ ವಿಚಾರಗಳಿಂದ ತುಂಬಿಹೋಗಿದ್ದವು. ಯಾವುದಾದರೂ ವಿಚಾರವನ್ನು ನೆನಪಿಸಿದ ತಕ್ಷಣ ಅದರ ಕುರಿತಾದ ಎಲ್ಲ ವಿವರಗಳನ್ನು ಥಟ್ಟನೆ ನೆನಪಿಸಿಕೊಳ್ಳುತ್ತಿದ್ದರು. ಕಳೆದ ವರ್ಷ ಪ್ರೊ. ಎಂ. ಬಸವರಾಜ್ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದ ಅವರ ಹಾಗೂ ನನ್ನ ಪುಸ್ತಕಗಳ ಬಿಡುಗಡೆಗೆ ಬಂದಿದ್ದ ಡಾ. ಜಿ. ರಾಮಕೃಷ್ಣ ಅವರು ಪ್ರಾಸಂಗಿಕವಾಗಿ, 'ನೀವು ವಾಕಿಂಗ್ ಹೋದಾಗ, ಹೋದ ದಾರಿಯೇ ಮರೆತು ಹೋದರೆ ಹಿಂದಿರುಗಿ ಬರಲು ಏನು ಮಾಡುತ್ತೀರಿ' ಎಂದು ತಮಾಷೆ ಮಾಡಿದ್ದರು. ಅದಕ್ಕೆ ಅವರು ಅಷ್ಟೇ ಮುಗ್ಧವಾಗಿ, 'ಅದಕ್ಕಾಗಿ ಒಂದೇ ರಸ್ತೆಯಲ್ಲಿ ಹೋಗಿ, ಅದೇ ರಸ್ತೆಯಲ್ಲಿ ವಾಪಸ್ಸು ಬಂದುಬಿಡುತ್ತೇನೆ' ಎಂದು ಮಕ್ಕಳಂತೆ ನಕ್ಕು ಹೇಳಿದ್ದರು.

ಸರಳಜೀವಿ, ಬಿ.ವಿ.ವೀ. ಸಾಯುವ ಹಿಂದಿನ ದಿನ ವಾಕಿಂಗ್‌ಗೆ ಹೋದಾಗ ಅದೇ ದಾರಿಯಲ್ಲಿ ಕುಸಿದು ಕುಳಿತಿದ್ದರು. ಯಾರೋ ಪರಿಚಿತರು ಕರೆದುಕೊಂಡು ಬಂದು ಮನೆಗೆ ತಲುಪಿಸಿದ್ದರು. ಕೂಡಲೇ ಆಸ್ಪತ್ರೆಗೆ ಸೇರಿಸಿದರೆ, ಕಡಿಮೆ ರಕ್ತದೊತ್ತಡ ಎಂದ ಡಾಕ್ಟರರು ಸೋಡಿಯಂನ್ನು ಸಪ್ಲಿಮೆಂಟ್ ಆಗಿ ನೀಡಿ ಉಪಚರಿಸುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ತಮ್ಮ ಸುದೀರ್ಘ ಪಯಣವನ್ನು ಮೊಟಕುಗೊಳಿಸಿ ಸೆಪ್ಟೆಂಬರ್ 21, 2017 ರಂದು ಹೊರಟೇಬಿಟ್ಟರು. ಇನ್ನು ಹದಿನೇಳು ದಿನ ಬದುಕುಳಿದಿದ್ದರೆ (ಜನ್ಮ ದಿನಾಂಕ ಅಕ್ಟೋಬರ್ 07, 1935) 83 ವಸಂತಗಳನ್ನು ಮುಗಿಸಿರುತ್ತಿದ್ದರು. ಹಾಗಂತ ಅವರ ದೇಹ ಮಣ್ಣಿನಲ್ಲೋ, ಬೆಂಕಿಯಲ್ಲೋ ಕರಗಿ ಹೋಗಿಲ್ಲ. ಅವರ ಆಶಯದಂತೆ ಅವರ ಕುಟುಂಬಸ್ಥರೂ ಪೂಜೆ ಪುನಸ್ಕಾರದಂಥ ಯಾವುದೇ ಉತ್ತರ ಕ್ರಿಯಾದಿಗಳನ್ನು ನೆರವೇರಿಸದೇ, ತಣ್ಣಗೆ ದೇಹದಾನ ಮಾಡಿದ್ದಾರೆ. ಬಿ.ವಿ.ವೀ. ಸತ್ತರೂ, ತಮ್ಮ ದೇಹವನ್ನೇ ಪಣಕ್ಕೊಡ್ಡಿ ದಾವಣಗೆರೆಯ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಜ್ಞಾನತೃಷೆಯನ್ನು ತಣಿಸುತ್ತಿದ್ದಾರೆ...

ವಿವಾದರಹಿತ ವಿಚಾರವಾದದ ಕೊನೆಯ ಕೊಂಡಿ (ಬಹುಶಃ) ಕಳಚಿಹೋಯಿತು...

## ಕಂನಾಡಿಗಾ ನಾರಾಯಣ

ಶಿವಮೊಗ್ಗೆಯ ಗಾಡಿಕೊಪ್ಪದವರಾದ ನಾರಾಯಣ ಎಂ.ಎ., ಎಂ.ಎಲ್. ಪದವೀಧರರು. 'ಮಂಡಲ', 'ಕ್ಷುದ್ರ ನಕ್ಷತ್ರದ ಕಪ್ಪು ರಂಧ್ರ', 'ಹಸಿರು ಕಣ್ಣಿನ ಹುಡುಗಿ', 'ನರವಿಂಧ್ಯ', 'ತಲ್ಲಣದ ಆ ಕ್ಷಣ...', 'ಜೀ ಗಾಂಧಿ...', 'ಇಹದ ಪರಿಮಳ' ಕಥಾ ಸಂಕಲನಗಳನ್ನು; 'ಕಾಂಡ', 'ಆಕಾಶ', 'ಭೂಮಿ', 'ದ್ವಾಪರ' ಕಾದಂಬರಿಗಳನ್ನು; 'ಮನದ ಮೊನೆ' ಎಂಬ ಸಾಂದರ್ಭಿಕ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.